ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore.karnataka.gov.in
E-mail ID: gmtech@cescmysore.org

Company Identity Number[CIN]:- U40109KA2004SGC035177

ಸಂಖ್ಯೆ: ಸೆಸ್ಕ್/ಪ್ರವ್ಯ(ತಾ)/ಉಪ್ರವ್ಯ(ತಾಂ)/ಸಪ್ರವ್ಯ(ತಾಂ-3)/ಸಿ1-2284/2020-21/ 14286-89

ದಿನಾಂಕ : 28 OCT 2020

ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ : Karnataka Small Scale Transformers Manufacturers Association, Karnataka Small Scale Industries Association ಮತ್ತು Peenya Industries Association ರವರ ಅನುಮೋದಿತ ಸರಬುರಾಜುದಾರರ ವೆಂಡರ್ ಸಿಂಧುತ್ವ ಕುರಿತು

ಉಲ್ಲೇಖ : ತಮ್ಮ ಕಛೇರಿ ಪತ್ರ ಸಂ.

1) Energy/854/VSC/2020-EMC-ENERGY SECRETARIAT Dt : 8.10.2020
2) Energy/846/VSC/2020-EMC-ENERGY SECRETARIAT Dt : 6.10.2020.
3) ಮಾನ್ಯ ವ್ಯವಸ್ಥಾಪಕ ರವರ ಅನುಮೋದಿತ ಟಿಪ್ಪಣಿ ದಿನಾಂಕ :21/10/2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Karnataka Small Scale Transformers Manufacturers Association, Karnataka Small Scale Industries Association ಮತ್ತು Peenya Industries Association ರವರು ಕೋವಿಡ್-19 ರ ಹಿನ್ನಲೆಯಲ್ಲಿ, MSME ತಯಾರಕ ಸಂಸ್ಥೆಗಳು ತೀವ್ರ ಆರ್ಥಿಕ ಒತ್ತಡದಲ್ಲಿರುವುರಿಂದ, ಚಾವಿಸನಿನಿಯ ಅನುಮೋದಿತ ವಿದ್ಯುತ್ ಸಾಮಾಗ್ರಿಗಳ ಸರಬುರಾಜುದಾರರ ವೆಂಡರ್ ಸಿಂಧುತ್ವವನ್ನು 6 ತಿಂಗಳ ಅವಧಿಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಪ್ರಸ್ತುತ ಚಾವಿಸನಿನಿಯಲ್ಲಿ ಒಟ್ಟು 125 ಅನುಮೋದಿತ ವೆಂಡರ್‌ಗಳು ಇರುತ್ತಾರೆ. ಇವರುಗಳಲ್ಲಿ 96 ಸಂಖ್ಯೆಯ ವೆಂಡರ್‌ಗಳ ಸಿಂಧುತ್ವವನ್ನು ಪ್ರಸ್ತುತ 2020-21 ನೇ ಸಾಲಿನಲ್ಲಿ ನವೀಕರಣಕ್ಕೆ ಬಾಕಿ ಇರುತ್ತದೆ. ಇದುವರೆಗು ಒಟ್ಟು 42 ಸಂಸ್ಥೆಗಳಿಗೆ, ಚಾವಿಸನಿನಿಯಲ್ಲಿ ಅನುಮೋದಿತ ಸರಬುರಾಜುದಾರರ ಕೋರಿಕೆಯ ಮೇರೆಗೆ ವೆಂಡರ್ ಸಿಂಧುತ್ವವನ್ನು ನವೀಕರಣ ಮಾಡಲಾಗಿರುತ್ತದೆ. ಕೋವಿಡ್-19ರ ಹಿನ್ನಲೆಯಲ್ಲಿ, ಫೆಬ್ರವರಿ-2020 ರಿಂದ ಸೆಪ್ಟೆಂಬರ್-2020ರ ಮಾಹೆಗಳಲ್ಲಿ, ಸರಬರಾಜುದಾರರ ವೆಂಡರ್ ಸಿಂಧುತ್ವ ಕೊನೆಗೊಂಡ ನಂತರದ ದಿನಗಳಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನೂ ಪರಿಗಣಿಸಿ, ನವೀಕರಣ ಮಾಡಲಾಗಿರುತ್ತದೆ. ಭಾರತೀಯ ಮಾನಕ ಸಂಸ್ಥೆಯ (BIS) ಕಡ್ಡಾಯ ಪರವಾನಗಿ ಅವಶ್ಯವಿರುವ ವಿತರಣ ಪರಿವರ್ತಕಗಳು ಹಾಗೂ ಕೇಬಲ್‌ಗಳ ತಯಾರಕರ ಅನುಮೋದನೆ ನವೀಕರಣಗಳನ್ನು ಅಕ್ಟೋಬರ್-2020ರವರೆಗೆ ವಿಸ್ತರಿಸಿ ನೀಡಲಾಗಿರುತ್ತದೆ.

ಫೆಬ್ರವರಿ-2020 ರಿಂದ ಮಾರ್ಚ-2021 ರವರೆಗೆ ಒಟ್ಟು 54 ಸಂಸ್ಥೆಗಳು ಅನುಮೋದನೆ ನವೀಕರಣವನ್ನು ಪಡೆಯಲು ಬಾಕಿ ಇರುತ್ತವೆ. ಈ ಸಂಸ್ಥೆಗಳು ನವೀಕರಣ ಕೋರಿಕೆಯನ್ನು ಸಲ್ಲಿಸಿದಲ್ಲಿ, ಆಯಾ ಸಂಸ್ಥೆಗಳಿಗೆ, ಮಾರ್ಚ್-2021 ರವರೆಗೆ ವಿಸ್ತರಿಸಲು ಕ್ರಮಕೈಗೊಳ್ಳಲಾಗುವುದು, ಇವುಗಳಲ್ಲಿ ಭಾರತೀಯ ಮಾನಕ ಸಂಸ್ಥೆಯ(BIS) ಕಡ್ಡಾಯ ಪರವಾನಗಿ ಅವಶ್ಯವಿರುವ ವಿತರಣ ಪರಿವರ್ತಕಗಳು ಹಾಗೂ ಕೇಬಲ್ ತಯಾರಕರ ವೆಂಡರ್ ಸಿಂಧುತ್ವವದ ನವೀಕರಣಗಳನ್ನು, ಸಂಬಂಧಿಸಿದ ಬಿ.ಐ.ಎಸ್. ನವೀಕರಣ ಪರವಾನಗಿಯನ್ನು ಸಲ್ಲಿಸಿದಲ್ಲಿ ಸರಬುರಾಜದಾರರ ವೆಂಡರ್ ಸಿಂಧುತ್ವದ ಅವಧಿಯನ್ನು, ಮಾರ್ಚ್-2020-21 ರವರೆಗೆ ವಿಸ್ತರಿಸಲಾಗವುದೆಂದು ತಿಳಿಸಲು ನಿರ್ದೇಶಿತನಾಗಿರುತ್ತೇನೆ.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾವಿಸನಿನಿ, ಮೈಸೂರು

ಪ್ರತಿಗಳು :

1) Karnataka Small Scale Transformers Manufacturers Association, #69/70, Muthuraya Swamy Layout, Srigandha Kavalu, Sunkadakatte, Bengaluru
2) Karnataka State Small Scale Industries Association, 2/106, 17th Cross, Magadi road, Vijayanagar, Bengaluru-560040
3) Peenya Industries Association, 18/B, 1st cross, 1st stage, Peenya Industrial Estate, Bengaluru-560058
4) ಆಪ್ತ ಸಹಾಯಕರು ವ್ಯ.ನಿ./ನಿ(ತಾಂ) ರವರು ಇದನ್ನು ಮಾನ್ಯ ವ್ಯ.ನಿ./ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ
   ಮು.ಕ/ಕ.ಕ